ಶಿರಾ ತಾಲ್ಲೂಕಿನ ಮದಲೂರಿನಲ್ಲಿ ಕೃಷಿ ಫಾರಂನ್ನು ಪ್ರಾರಂಭಿಸುವುದು.

೬೮ (೧೦೬.) ಶ್ರೀ ಪಿ. ಮುದ್ದಲಿಗೌಡ (ಶಿರಾ).—ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿರಾ ತಾಲ್ಲೂಕಿನ ಮದಲೂರಿಗೆ ಒಂದು ಪ್ರದೇಶದಲ್ಲಿ ಒಳ ಬೇಸಾಯಭಿವೃದ್ಧಿಗಾಗಿ ಒಂದು ಫಾರಂ ಸ್ಥಾಪಿಸಲು ಕೃಷಿ ವಿಶ್ವವಿದ್ಯಾನಿಲಯದವರು ಉದ್ದೇಶಿಸಿ ಸ್ಥಳ ತನಿಖೆ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಫಾರಂ ಪ್ರಾರಂಭಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ,

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

ಅ) ಹೌದು.

ಆ) ಮದಲೂರಿನಲ್ಲಿ ಸಳ್ಳ ತನಿಖೆ ನಡೆಸಿದ ಭೂವಿಂಯಲು ಬಹಳ ಒಳಭಾಗದಲ್ಲಿರುವುದರಿಂದ ಅಭಿವೃದ್ಧಿಫಾರಂ ಸ್ಥಾಪಿಸಲು ವಿತವ್ಯಯ ದೃಷ್ಟಿಯಿಂದ ಯೋಗ್ಯ ಸ್ಥಳವಲ್ಲವೆಂದು ಕಂಡು ಬಂದಿರುತ್ತೆ.

ಶ್ರೀ ಎ. ಲಕ್ಷ್ಮಿ ಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ನಾಲ್ಕನೆಯ ಪಟ್ಟಿಯನ್ನು ತಮ್ಮ ಅಪ್ಪಣೆಯನ್ನು ಕೋರಿ ಈ ಸಭೆಯ ಮುಂದೆ ಇಡುತ್ತೇನೆ .

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ರಿಂಡರ್‌ಪೆಸ್ಟ್ ಸಾಂಕ್ರಾಮಿಕ ರೋಗದಿಂದ ಸತ್ತ ಕುರಿಗಳಿಗೆ ಪರಿಹಾರ ಕೊಡುವ ಬಗ್ಗೆ

೩೦ (೯) ಶ್ರೀ ಕೆ. ಎಚ್. ಕುರುಡಗಿ (ಮುಂಡರಗಿ).—ಮಾನ್ಯ ಪಶುಪೈದ್ಯ ಪಶುಸಂಗೋಪನಾ ಹಾಗೂ ತೋಟಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ದಿನಾಂಕ ೧೦-೧೨-೧೯೮೨ ಮತ್ತು ೨೯-೬-೧೯೮೩ರ ಆಜ್ಞೆ ಸಂಖ್ಯೆ ಎಎಹೆಚ್ ೩೨೫ ಎಹೆಚ್‌ಪಿ ೮೨ರ ಪ್ರಕಾರ ಬಳ್ಳಾರಿ, ಚಿತ್ರದುರ್ಗ, ಧಾರವಾಡ, ಬಿಜಾಪುರ, ಬಿದರ್ ಜಿಲ್ಲೆಗಳಲ್ಲಿ ರಿಂಡರ್ ಪೆಸ್ಟ್ ರೋಗದಿಂದ ಸತ್ತ ಕುರಿಗಳಿಗೆ ಪರಿಹಾರ ಕೊಡಲು ಎಷ್ಟು ಹಣ ಮಂಜೂರು ಮಾಡಲಾಗಿದೆ ?

ಆ) ಎಷ್ಟು ದಿನಗಳಲ್ಲಿ ಪರಿಹಾರ ಕೊಡಬೇಕೆಂದು ಆಜ್ಞೆಯಾಗಿದೆ ? ಆ ಆಜ್ಞೆ ಪ್ರಕಾರ ಎಷ್ಟು ಅರ್ಜಿ ಬಂದಿವೆ, ಒಟ್ಟು ಎಷ್ಟು ಕುರಿಗಳು ಸತ್ತಿವೆ ?

ಇ) ಪರಿಹಾರ ರೂಪದಲ್ಲಿ ಹಾಗೂ ಸಾಲರೂಪದಲ್ಲಿ ಹಣವನ್ನೇನಾದರೂ ಕೊಡಲಾಗಿದೆಯೇ ? ಹಾಗಿದ್ದಲ್ಲಿ ಎಷ್ಟು ಹಣವನ್ನು ಕೊಡಲಾಗಿದೆ ಎಷ್ಟು ಹಣ ಉಳಿದಿದೆ ?

ಈ) ಹಾಗೆ ಪರಿಹಾರ ಕೊಡದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ವಿಶ್ವನಾಥ ರೆಡ್ಡಿ. (ಪಶುಸಂಗೋಪನಾ ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು).—

ಅ) ಸತ್ತ ಕುರಿಗಳ ಮಾಲೀಕರಿಗೆ ಪರಿಹಾರ ಕೊಡಲು ೧ ಲಕ್ಷ ರೂಪಾಯಿಗಳನ್ನು ಬಳ್ಳಾರಿ, ಚಿತ್ರದುರ್ಗ, ಧಾರವಾಡ, ಬಿಜಾಪುರ, ಬಿದರ್ ಮತ್ತು ಬೆಳಗಾವಿ ಜಿಲ್ಲೆಗಳಿಗೆ ಮಂಜೂರು ಮಾಡಿದೆ.

ಆ) ೧೫ ದಿವಸಗಳೊಳಗಾಗಿ.

ಬೆಳಗಾವಿ	ಜಿಲ್ಲೆ	...	೪೨ ಅರ್ಜಿಗಳು	...	೯೧೫ ಕುರಿಗಳು ಸತ್ತಿವೆ.
ಬಿಜಾಪುರ	,,	...	೨೧೦ ,,		೭೭೩ ,,
ಬಳ್ಳಾರಿ	,,	...	೮೩ ,,		೧೪೨೮ ,,
ಧಾರವಾಡ	,,	...	೩೦೯ ,,		೮೩೯ ,,
ಚಿತ್ರದುರ್ಗ	,,	...	ಇಲ್ಲ		ಇಲ್ಲ
ಬಿದರ್	,,	...	೯೭೬ ಅರ್ಜಿಗಳು		೧೪೦೦೦ ಕುರಿಗಳು ಸತ್ತಿವೆ